





ಬಂದಿದ್ದು, ಜೀವವೈವಿಧ್ಯದ ಪಾಠಗಳನ್ನು ಅರಿತು ಸಂತಸಪಟ್ಟಿದ್ದಾರೆ.

‘ಪ್ರಾಣಿ’ಧಾಮದಲ್ಲಿ ಸುಮಾರು 50 ಜಾತಿಯ 700 ಪ್ರಾಣಿಗಳನ್ನು ಸಂಜೀವ್ ಪೋಷಿಸುತ್ತಿದ್ದಾರೆ. ಅಲ್ಲಿರುವ ಪ್ರತಿಯೊಂದು ಪ್ರಾಣಿಯ ಹಿಂದೆಯೂ ಒಂದು ದಾರುಣ ಕಥೆಯಿದೆ. ಒಂದು ಉದಾಹರಣೆ ನೋಡಿ: ಒಮ್ಮೆ ಬೆಂಗಳೂರಿನ ತಲಘಟ್ಟಪುರದ ಮೋರಿಯಲ್ಲಿ ಒಂದು ಕುದುರೆ ಬಿದ್ದಿದೆ ಎನ್ನುವ ಸುದ್ದಿ ಬಂತು. ಅದನ್ನು ಕ್ರೇನ್ ಬಳಸಿ ಮೇಲಕ್ಕೆತ್ತಿ, ಶುಚಿಗೊಳಿಸಿ ಆರೈಕೆ ಮಾಡಿದ ನಂತರ ಅದು ಗರ್ಭ ಧರಿಸಿದ್ದು ಗೊತ್ತಾಯಿತು. ಹದಿನೈದು ದಿನಗಳ ನಂತರ ಮರಿಯನ್ನೂ ಹಾಕಿತು. ಆ ಕುದುರೆ ಸಂಸಾರವೀಗ ‘ಪ್ರಾಣಿ’ಧಾಮದಲ್ಲಿ ಬೆಚ್ಚಗಿದೆ.

ಹೊಸ ಜೀವಿಯೊಂದು ಸದಸ್ಯತ್ವ ಪಡೆಯಿತು ಎಂದರೆ ಅಚ್ಚರಿಯ ಮತ್ತೊಂದು ಅಧ್ಯಾಯ ‘ಪ್ರಾಣಿ’ಪತ್ಯ ಸೇರಿದೆ ಎಂದೇ ಅರ್ಥ. ಬಹುತೇಕ ಜೀವಿಗಳು ಸಾವು ಗೆದ್ದು ಬಂದು ಅಲ್ಲಿ ನೆಲೆ ನಿಂತಿರುವುದು ವಿಶೇಷ.

## ಸಂರಕ್ಷಿತ ಪ್ರಾಣಿಗಳಿಗೆ ಆಸರೆ

ತಮ್ಮ ಒಡೆಯರ ಜೊತೆಗೆ ವಿದೇಶದ ವಿಮಾನ ಹತ್ತಬೇಕಿದ್ದ ಕೆಲವು ಜೀವಗಳೂ ಇಲ್ಲಿ ಬಂದು ನೆಲೆಸಿವೆ. ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ಅವುಗಳನ್ನು ಹಿಡಿದು ಇಲ್ಲಿಗೆ ಒಪ್ಪಿಸಿದ್ದಾರೆ. ಅಷ್ಟು ಮಾತ್ರವಲ್ಲ, ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಸಿಬ್ಬಂದಿ ಪ್ರಾಣಿಗಳ ಕಳ್ಳಸಾಗಣೆ ಭೇದಿಸಿದ ಸಂದರ್ಭದಲ್ಲಿ – ಅವುಗಳನ್ನು ಸಂಜೀವರ ವಶಕ್ಕೆ ನೀಡಿದ್ದಾರೆ. ಬಣ್ಣ ಬಣ್ಣದ ಹಲ್ಲಿಗಳು, ಆಮೆಗಳು, ಉಡ, ಉಡದ ಜಾತಿಯ ಗೌನ (ಸಸ್ಯಾಹಾರಿ) – ಇಂಥ ಅನೇಕ ಪ್ರಾಣಿಗಳ ಕಳ್ಳಸಾಗಣೆ ನಡೆಯುತ್ತದೆ. ಪ್ರಾಣಿ ರಕ್ಷಣಾ ಸಂಬಂಧ ತಪಾಸಣೆಯಲ್ಲಿ ಅವರು ಸಿಕ್ಕಿಬಿದ್ದರೆ, ಆ ಪ್ರಾಣಿಗಳ ಪೋಷಣೆಯ ಜವಾಬ್ದಾರಿ ‘ಪ್ರಾಣಿ’ಧಾಮದ ಪಾಲಿಗೆ ಬಂದದ್ದಿದೆ.

ಸಂರಕ್ಷಿಸಿಲಾದ ಬಹುತೇಕ ಪ್ರಾಣಿಗಳನ್ನು ಕಾಡಿಗೆ ಬಿಡಲು ಆಗುವುದಿಲ್ಲ. ಏಕೆಂದರೆ ಅವು ಮನುಷ್ಯ ಸಮಾಜದ ಜೊತೆ ಹೊಂದಿಕೊಂಡಿರುತ್ತವೆ. ಹಾಗಾಗಿ ಅವುಗಳ ರಕ್ಷಣೆಯನ್ನು ‘ಪ್ರಾಣಿ’ಧಾಮದಂತಹ ಸಂಸ್ಥೆಗಳಿಗೆ ನೀಡುವುದು ಅನಿವಾರ್ಯ.

ಇತ್ತೀಚೆಗೆ ವಿದ್ಯುತ್ ಇಲಾಖೆಯ ಕಚೇರಿಯೊಂದರಲ್ಲಿ ಮಂಟಬೆಕ್ಕು (ಕಪ್ಪು ಬೆಕ್ಕು, ಮರಬೆಕ್ಕು) ನಾಲ್ಕು ಮರಿಗಳಿಗೆ ಜನ್ಮ ನೀಡಿತ್ತು. ಆಹಾರ ಅರಸಿ ಹೊರ ಹೋದಾ ತಾಯಿಬೆಕ್ಕು ವಿದ್ಯುತ್ ಆಘಾತಕ್ಕೆ ತುತ್ತಾಗಿ ಸತ್ತುಹೋಗಿದೆ. ಇನ್ನೂ ಸರಿಯಾಗಿ ಕಣ್ಣನ್ನೂ ಬಿಡದಿರುವ ಮರಿಗಳ ಕಿರುಚಾಟ ಕೇಳಿ ಅಲ್ಲಿನ ಸಿಬ್ಬಂದಿ ಸಂಜೀವ್ ಅವರಿಗೆ ಫೋನ್ ಮಾಡಿದ್ದಾರೆ. ಹೀಗೆ ಪ್ರಾಣಿಧಾಮದ ಸಂತತಿ ಬೆಳೆಯುತ್ತಿದೆ.

## ಕೋವಿಡ್ ಸಂಕಷ್ಟ

ಪ್ರತಿ ವರ್ಷ ಫೆಬ್ರುವರಿ ಕೊನೆಯಲ್ಲಿ ‘ಪ್ರಾಣಿಧಾಮ‘ ರಜೆ ಘೋಷಿಸುತ್ತದೆ. ಮಾರ್ಚ್ ತಿಂಗಳಲ್ಲಿ ಮಕ್ಕಳಿಗೆ ಪರೀಕ್ಷೆಗಳಿರುವುದರಿಂದ, ಆ ಸಮಯದಲ್ಲಿ ‘ಪ್ರಾಣಿಧಾಮ’ಕ್ಕೂ ರಜೆ. ಏಪ್ರಿಲ್ ತಿಂಗಳಿಂದ ಮಕ್ಕಳು ಪ್ರಾಣಿಗಳನ್ನು ನೋಡಲು ಬರುತ್ತಾರೆ. ಆದರೆ, ಈ ವರ್ಷ ಕೊರೊನಾ ಲಾಕ್‌ಡೌನ್‌ನಿಂದಾಗಿ ಮಕ್ಕಳು ಮನೆಗಳಲ್ಲೇ



‘ಪ್ರಾಣಿ’ಧಾಮ ವೀಕ್ಷಣೆಗೆ
bit.ly/2QP8LO5
ಕೊಂಡಿ/ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.